## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 450**
**ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)**
**ಉತ್ತರಿಸಬೇಕಾದ ದಿನಾಂಕ : 12.12.2024**
**ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿ**

****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣಗೊಂಡಿರುವ ಬನಶಂಕರಿ 6ನೇ ಹಂತದ 4ನೇ ಬ್ಲಾಕ್‌ನ (ಮುಂದುವರೆದ ಬಡಾವಣೆ) ಬಡಾವಣೆಯ ಮುಖ್ಯ ರಸ್ತೆಯನ್ನು (ನಾಗೇಗೌಡನ ಪಾಳ್ಯ ರಸ್ತೆ) ಅಭಿವೃದ್ಧಿಪಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br>ಸರ್ಕಾರದ ಗಮನಕ್ಕೆ ಬಂದಿದ್ದು, ಸದರಿ ರಸ್ತೆಯಲ್ಲಿ ಹಾಳಾಗಿದ್ದ ರಸ್ತೆ ಭಾಗಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 2024ರ ಫೆಬ್ರುವರಿ ಮಾಹೆಯಲ್ಲಿ ದುರಸ್ತಿಗೊಳಿಸಲಾಗಿರುತ್ತದೆ. |
| ಆ) | ಸದರಿ ಬಡಾವಣೆಯಲ್ಲಿ ರಸ್ತೆಗಳು ತುಂಬಾ ಹಾಳಾಗಿದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಇ) | ಬಡಾವಣೆಯ ಮುಖ್ಯರಸ್ತೆಯಿಂದ (ನಾಗೇಗೌಡನ ಪಾಳ್ಯ ರಸ್ತೆ) ಕನಕಪುರ ರಸ್ತೆಗೆ ಸಂಪರ್ಕ ಕಲ್ಪಿಸದಿರಲು ಕಾರಣಗಳೇನು; ಈ ರಸ್ತೆಯನ್ನು ಕೆಲವರು ಅತಿಕ್ರಮಿಸಿರುವುದರಿಂದ ಸದರಿ ಬಡಾವಣೆಗೆ ಕನಕಪುರ ರಸ್ತೆಯಿಂದ ಬದಲು ರಸ್ತೆ ಸಂಪರ್ಕವಿಲ್ಲದೆ ಬಡಾವಣೆ ನಿವಾಸಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ನಾಗೇಗೌಡನ ಪಾಳ್ಯ ಮುಖ್ಯ ರಸ್ತೆಯಿಂದ ಮಂತ್ರಿ ಕೋರ್ಟ್ ಯಾರ್ಡ್ ವಸತಿ ಸಂಕೀರ್ಣದ ಮುಖಾಂತರ ಕನಕಪುರ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸಲಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಯ ರಸ್ತೆಗಳಲ್ಲಿ ಯಾವುದೇ ರೀತಿಯ ಅತಿಕ್ರಮಣವಾಗಿರುವುದಿಲ್ಲ. |

ಸಂಖ್ಯೆ: ನಅಇ 279 ಬೆಂಭೂಸ್ವಾ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ